ರಾಜ್ಯದಲ್ಲಿ ನೂತನ ರೇಷ್ಮೆ ಮಾರುಕಟ್ಟೆ ಆರಂಭ

1322(1623) ಶ್ರೀ ಲಕ್ಷ್ಮೀನಾರಾಯಣ ಎಂ.ಡಿ (ಅಣ್ಣಯ್ಯ) (ತುರುವೇಕೆರೆ) : ಮಾನ್ಯ ರೇಷ್ಮೆ ಮತ್ತು ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ರೇಷ್ಮೆ ಗೂಡಿನ ಮಾರುಕಟ್ಟೆಗಳ ಸಂಖ್ಯೆ ಎಷ್ಟು? (ಜಿಲ್ಲಾವಾರು ಮಾಹಿತಿ ನೀಡುವುದು)

ಆ) ಸದರಿ ಮಾರುಕಟ್ಟೆಗಳು ಉತ್ತಮ ಸ್ಥಿತಿಯಲ್ಲಿ ನಡೆಯುತ್ತಿವೆಯೇ ಇವುಗಳಲ್ಲದೆ ಪುನಃ ಹೊಸದಾಗಿ ಬಿತ್ತನೆ ಮಾರುಕಟ್ಟೆಗಳನ್ನು ಸರ್ಕಾರ ಸ್ಥಾಪಿಸಲು ಉದ್ದೇಶಿಸಿದೆಯೇ? ಎಲ್ಲೆಲ್ಲಿ ವಿವರ ನೀಡುವುದು.

ಇ) ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ನೂತನ ಮಾರುಕಟ್ಟೆಗಳ ಅಗತ್ಯ ಇರುವುದು ಕಂಡುಬಂದಿದೆಯೇ? ಹಾಗಿದ್ದಲ್ಲಿ ಎಷ್ಟು ಮಾರುಕಟ್ಟೆಗಳನ್ನು ನಿರ್ಮಿಸಲು ಉದ್ದೇಶಿಸಿದೆ?

ಈ) ಈ ಮಾರುಕಟ್ಟೆಯನ್ನು ಸ್ಥಾಪಿಸುವ ಬಗ್ಗೆ ವಿರೋಧಗಳಿದ್ದಿದ್ದು ನಿಜವೇ?

ಉ) ಈ ವಿರೋಧದ ನಡುವೆಯೂ ಏಕೆ ಮಾರುಕಟ್ಟೆ ಸ್ಥಾಪಿಸಲಾಯಿತು. ಇದರಿಂದ ಸರ್ಕಾರಕ್ಕೆ ಬಂದ ಖರ್ಚೆಷ್ಟು?

ಶ್ರೀ ಹೆಚ್.ಎಂ. ರೇವಣ್ಣ (ರೇಷ್ಮೆ ಮತ್ತು ಜವಳಿ ಸಚಿವರು):

ಅ) ರಾಜ್ಯದಲ್ಲಿ ಒಟ್ಟು ರೇಷ್ಮೆ ಗೂಡಿನ ಮಾರುಕಟ್ಟೆಗಳ ಸಂಖ್ಯೆ - 66 (ಜಿಲ್ಲಾವಾರು ವಿವರಗಳನ್ನು ಅನುಬಂಧದಲ್ಲಿ ನೀಡಿದೆ)

ಆ) ಗೂಡು ಮಾರುಕಟ್ಟೆಗಳು ಉತ್ತಮವಾಗಿ ಕಾರ್ಯ ನಿರ್ವಹಿಸುತ್ತಿವೆ. ಮೈಸೂರು ಬಿತ್ತನೆ ಪ್ರದೇಶದ ಮಾಗಡಿ ತಾಲ್ಲೂಕಿನ ಸೋಲೂರಿನಲ್ಲಿ ದಿನಾಂಕ 2-5-2002ರಿಂದ ಬಿತ್ತನೆ ಗೂಡು ಮಾರುಕಟ್ಟೆ ಹೊಸದಾಗಿ ಪ್ರಾರಂಭಿಸಲಾಗಿದೆ.

ಇ) ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಮಾಗಡಿ ತಾಲ್ಲೂಕು ಬಿತ್ತನೆ ಗೂಡು ಬೆಳೆಯುವ ಪ್ರದೇಶವಾಗಿದ್ದು, ಬಿತ್ತನೆ ಬೆಳೆಗಾರರ ಮತ್ತು ಮೊಟ್ಟೆ ಉತ್ಪಾದಕರ ಅನುಕೂಲಕ್ಕಾಗಿ ಸೋಲೂರಿನಲ್ಲಿ ನೂತನ ಬಿತ್ತನೆ ಗೂಡು ಮಾರುಕಟ್ಟೆಯನ್ನು ದಿನಾಂಕ 2-5-2002 ರಿಂದ ಸ್ಥಾಪಿಸಲಾಗಿದೆ. ಸದ್ಯದಲ್ಲಿ, ಹೊಸದಾಗಿ ಮಾರುಕಟ್ಟೆ ಸ್ಥಾಪಿಸುವ ಪ್ರಸ್ತಾವನೆ ಇರುವುದಿಲ್ಲ.

ಈ) ಸೋಲೂರು ಮಾರುಕಟ್ಟೆ ಸ್ಥಾಪಿಸಲು ವಿರೋಧವಿದ್ದುದು ನಿಜ.

ಉ) ರೇಷ್ಮೆ ಬಿತ್ತನೆ ಬೆಳೆಗಾರರು ಹಾಗೂ ಖಾಸಗಿ ಮೊಟ್ಟೆ ತಯಾರಕರ ಅನುಕೂಲಕ್ಕಾಗಿ ಸಾರಿಗೆ ಸಂಪರ್ಕವಿರುವ ಸೋಲೂರು ಕೇಂದ್ರ ಸ್ಥಾನದಲ್ಲಿ ಬಿತ್ತನೆ ರೇಷ್ಮೆಗೂಡಿನ ಮಾರುಕಟ್ಟೆ ಸ್ಥಾಪಿಸಲಾಗಿದೆ. ಹಾಲಿ ಇರುವ ಸಿಬ್ಬಂದಿಯನ್ನೆ ಉಪಯೋಗಿಸಿ ಮಾಹೆಯಾನ ರೂ. 48.00 ರಂತೆ ಬಾಡಿಗೆ ಕಟ್ಟಡದಲ್ಲಿ ದಿನಾಂಕ 2-5-2002 ರಿಂದ ಮಾರುಕಟ್ಟೆ ಪ್ರಾರಂಭಿಸಲಾಗಿದ್ದು ಸರ್ಕಾರಕ್ಕೆ ಸಿಬ್ಬಂದಿ ವೆಚ್ಚದ ಹೆಚ್ಚಿನ ಹೊರೆ ಇರುವುದಿಲ್ಲ.

ಅನುಬಂಧ

ಜಿಲ್ಲಾವಾರು ಸರ್ಕಾರಿ ರೇಷ್ಮೆ ಗೂಡಿನ ಮಾರುಕಟ್ಟೆಗಳ ವಿವರಗಳು

ಕ್ರ.ಸಂ.	ಜಿಲ್ಲೆ	ಕ್ರ.ಸಂ.	ಮಾರುಕಟ್ಟೆ ಇರುವ ಸ್ಥಳ
1	2	3	4
1.	ಬೆಂಗಳೂರು ಗ್ರಾಮಾಂತರ	1)	ಕನಕಪುರ
	-"-	2)	ರಾಮನಗರಂ

1	2	3	4
1.	ಬೆಂಗಳೂರು ಗ್ರಾಮಾಂತರ	3)	ಚನ್ನಪಟ್ಟಣ
	-"-	4)	ವಿಜಯಪುರ
	-"-	5)	ಮಾಗಡಿ (ಮೈಸೂರು ಬಿತ್ತನೆ ವಲಯ)
	-"-	6)	ವಿರೇಗೌಡನದೊಡ್ಡಿ -"-
	-"-	7)	ಕುದೂರು -"-
	-"-	8)	ದೇವನಹಳ್ಳಿ (ನಡೆಯುತ್ತಿಲ್ಲ)
	-"-	9)	ಸೋಲೂರು (ಮೈಸೂರು ಬಿತ್ತನೆ ಪ್ರದೇಶ)
2.	ಬೆಂಗಳೂರು ನಗರ	10)	ಬೆಂಗಳೂರು (ದ್ವಿತಳಿ)
	-"-	11)	ಅತ್ತಿಬೆಲೆ (ದ್ವಿತಳಿ)
	-"-	12)	ಸರ್ಜಾಪುರ (ದ್ವಿತಳಿ)
	-"-	13)	ಬಾಗಲೂರು
3.	ಬಾಗಲಕೋಟೆ	14)	ಮುಧೋಳ
4.	ಬೆಳಗಾವಿ	15)	ಬೆಳಗಾವಿ (ದ್ವಿತಳಿ)
	-"-	16)	ಅಥಣಿ
	-"-	17)	ಗೋಕಾಕ್
5.	ಬಳ್ಳಾರಿ	18)	ಬಳ್ಳಾರಿ
	-"-	19)	ಕೂಡ್ಲಿಗಿ
6.	ಬೀದರ್	20)	ಹುಮ್ನಾಬಾದ್
7.	ಬಿಜಾಪುರ	21)	ಬಿಜಾಪುರ
8.	ಚಾಮರಾಜನಗರ	22)	ಚಾಮರಾಜನಗರ
	-"-	23)	ಕೊಳ್ಳೇಗಾಲ
	-"-	24)	ಸಂತೇಮರಹಳ್ಳಿ
	-"-	25)	ಹನೂರು
	-"-	26)	ಹರವೆ
9.	ಚಿಕ್ಕಮಗಳೂರು	27)	ಕಡೂರು
10.	ಚಿತ್ರದುರ್ಗ	28)	ಚಿತ್ರದುರ್ಗ
11.	ದಕ್ಷಿಣ ಕನ್ನಡ	29)	ಬಿ.ಸಿ.ರೋಡ್
12.	ದಾವಣಗೆರೆ	30)	ದಾವಣಗೆರೆ
13.	ಧಾರವಾಡ	31)	ರಾಯಾಪುರ (ದ್ವಿತಳಿ)
14.	ಗದಗ್	32)	ಗದಗ್
	-"-	33)	ಶಿರಹಟ್ಟಿ
15.	ಗುಲ್ಬರ್ಗಾ	34)	ಜೀವರ್ಗಿ
		35)	ಗುಲ್ಬರ್ಗಾ

1	2	3	4
16.	ಹಾಸನ	36)	ಹಾಸನ
		37)	ರಾಮನಾಥಪುರ
17.	ಹಾವೇರಿ	38)	ಹಾವೇರಿ
18.	ಕೊಡಗು	39)	ಕುಶಾಲನಗರ
19.	ಕೋಲಾರ	40)	ಕೋಲಾರ
	-"-	41)	ಚಿಂತಾಮಣಿ
	-"-	42)	ಶಿಡ್ಲಘಟ್ಟ
	-"-	43)	ಶ್ರೀನಿವಾಸಪುರ
	-"-	44)	ಹೆಚ್.ಕ್ರಾಸ್
	-"-	45)	ಚಿಕ್ಕಬಳ್ಳಾಪುರ
	-"-	46)	ಮುಳಬಾಗಿಲು
	-"-	47)	ಕ್ಯಾಲನೂರು
	-"-	48)	ಗೌರಿಬಿದನೂರು (ನಡೆಯುತ್ತಿಲ್ಲ)
	-"-	49)	ಬಂಗಾರಪೇಟೆ (ನಡೆಯುತ್ತಿಲ್ಲ)
20.	ಕೊಪ್ಪಳ		-ಇಲ್ಲ-
21.	ಮಂಡ್ಯ	50)	ಮಂಡ್ಯ (ನಡೆಯುತ್ತಿಲ್ಲ)
	-"-	51)	ಮಳವಳ್ಳಿ
	-"-	52)	ಶ್ರೀರಂಗಪಟ್ಟಣ (ನಡೆಯುತ್ತಿಲ್ಲ)
	-"-	53)	ಕೆ.ಆರ್.ಪೇಟೆ (ದ್ವಿತಳಿ)
22.	ಮೈಸೂರು	54)	ನಂಜನಗೂಡು
	-"-	55)	ಹುಣಸೂರು
	-"-	56)	ಟಿ.ನರಸೀಪುರ
23.	ರಾಯಚೂರು	57)	ಲಿಂಗಸಗೂರು
24.	ಶಿವಮೊಗ್ಗ	58)	ಶಿವಮೊಗ್ಗ
25.	ತುಮಕೂರು	59)	ತುಮಕೂರು
	-"-	60)	ಹೆಬ್ಬೂರು (ಮೈಸೂರು ಬಿತ್ತನೆ ಪ್ರದೇಶ)
	-"-	61)	ಕುಣಿಗಲ್ -"-
	-"-	62)	ಸಂತೇಮಾವತ್ತೂರು -"-
	-"-	63)	ಕೆಂಪನಹಳ್ಳಿ -"-
	-"-	64)	ಹುಲಿಯೂರುದುರ್ಗ -"-
	-"-	65)	ಚೌಚಕುಪ್ಪೆ -"-
26.	ಉಡುಪಿ		-ಇಲ್ಲ-
27.	ಉತ್ತರ ಕನ್ನಡ	66)	ಸಿರ್ಸಿ (ದ್ವಿತಳಿ)